SC No.214/21
PW.1

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 214/21**

**ಫ್ರಾಸಾ-1** **ಚಾಸಾ- 1**

ಸಾಕ್ಷಿದಾರರ ಹೆಸರುಃ : ನಾರಾಯಣ

ತಂದೆಯ ಹೆಸರುಃ : ಬೇಲೂರೇಗೌಡ

ವಯಸ್ಸುಃ : 63 ವರ್ಷ

ಉದ್ಯೋಗಃ : ವ್ಯವಸಾಯ

ವಾಸ : ಗಾಡೇನಹಳ್ಳಿ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:06-02-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ.2 ನನ್ನ ಹೆಂಡತಿ. ಚಾಸಾ.3 ಮೊಮ್ಮಗಳು.

2. ನನ್ನ ಮನೆ ಬೆಂಗಳೂರು ಮಂಗಳೂರು ರಾಷ್ಟ್ರೀಯ ಹೆದ್ದಾರಿಯಿಂದ 5 ಕಿ.ಮೀಟರ್ ದೂರದಲ್ಲಿ ಇರುತ್ತದೆ. 2018 ರಲ್ಲಿ ನಾನು ನನ್ನ ಹೆಂಡತಿ ಮತ್ತು ಮೊಮ್ಮಗಳು ಚಾಸಾ.3 ಮತ್ತು ಇನ್ನೊರ್ವ ಮೊಮ್ಮಗ ,ಚಿರಾಗ್ ರವರೊಂದಿಗೆ ನನಗೆ ಸೇರಿದ ಆಕ್ಟೀವ ಹೋಂಡ ಬೈಕ್ ನಲ್ಲಿ ಹಾಸನದ ಸರಕಾರಿ ಆಸ್ಪತ್ರೆಗೆ ನನ್ನ ಹೆಂಡತಿಗೆ ಹಲ್ಲಿನ ಚಿಕಿತ್ಸೆಗೆಗಾಗಿ ಕರೆದುಕೊಂಡು ಬಂದಿದ್ದೆನು. ಊರಿನಿಂದ ನಾವು ಸಂಜೆ 5 ಗಂಟೆಗೆ ಮನೆಯಿಂದ ಹೊರಟಿರುತ್ತೇವೆ, ಆಸ್ಪತ್ರೆಗೆ ಹೋಗಿ ವಾಪಸ್ಸು ಸಂಜೆ 07.30 ಗಂಟೆಗೆ ಅದೇ ಬೈಕಿನಲ್ಲಿ ಅವರೆಲ್ಲರೊಂದಿಗೆ ನಾನು ಊರಿನ ಕಡೆ ಬರುತ್ತಿದ್ದೆನು. ರಾತ್ರಿ ಸುಮಾರು 07.45 – 08.00 ಗಂಟೆ ಸಮಯದಲ್ಲಿ ಗಾಡೇನಹಳ್ಳಿ ಕ್ರಾಸ್ ಹತ್ತಿರ ಬಿ ಎಂ ರಸ್ತೆಯಿಂದ ನಮ್ಮ ಊರಿಗೆ ಹೋಗಲು ಬೈಕ್ ನ್ನು ತಿರುಗಿಸಿಕೊಂಡು ರಸ್ತೆ ಹಂಪ್ಸ್ ನ್ನು ದಾಟಿಕೊಂಡು ಮುಂದಕ್ಕೆ ಹೋಗುತ್ತಿದ್ದಾಗ, ಹಿಂದಿನಿಂದ ನ್ಯಾಯಾಲಯದ ಮುಂದಿರುವ ಆರೋಪಿ ಬೈಕಿನಿಂದ ಬಂದು ನನ್ನ ಬೈಕ್ ನ್ನು ಅಡ್ಡಹಾಕಿ ಮುಂದೆ ಹೋಗದಂತೆ ತಡೆದನು, ಆತನು ತನ್ನ ಹಿಂಬದಿಯಿಂದ ಚಾಕುವನ್ನು ತೆಗೆದು ನಮಗೆ ಹಲ್ಲೆ ಮಾಡುತ್ತೇನೆ ಎಂದು ಬಂದನು, ಆಗ ನಾನು ಸ್ವಲ್ಪ ಬೈಕ್ ನ್ನು ತಿರುಗಿಸಿದಾಗ, ಬೈಕ್ ಸಮೇತ ಎಲ್ಲರು ಕೆಳಗೆ ಬಿದ್ದೆವು. ಆಗ ಆತನು ನನ್ನ ಹೆಂಡತಿಯ ಕೊರಳಿದ್ದ 2 ಚೈನ್ ನ್ನು ಕಿತ್ತುಕೊಂಡು ನನ್ನ ಬಳಿಯಿದ್ದ ಪರ್ಸ್ ಮತ್ತು ಎ ಟಿ ಎಂ ಕಾರ್ಡ್ ನ್ನು ಹಾಗೂ ಕೀ ಪ್ಯಾಡ್ ಮೊಬೈಲ್ ನ್ನು ಕಿತ್ತು ಕೊಂಡನು. ಪರ್ಸ್ ನಲ್ಲಿ ಸ್ವಲ್ಪ ಹಣ ಇತ್ತು ಎಷ್ಟು ಎಂದು ನಾನು ಲೆಕ್ಕ

ಹಾಕಿರಲಿಲ್ಲ, ಅವೆಲ್ಲವನ್ನು ಆತನು ಕಿತ್ತುಕೊಂಡು ಶಾಂತಿಗ್ರಾಮ ಹೈವೇ ಕಡೆಗೆ ಪರಾರಿಯಾದನು. ಆ ವ್ಯಕ್ತಿಯನ್ನು ಆ ಸಮಯದಲ್ಲಿ ಸ್ವಲ್ಪ ಗುರುತಿಸಿರುತ್ತೇವೆ, ನಂತರ ಠಾಣೆಯಲ್ಲಿ ಪೊಲೀಸರು ಕರೆದಾಗ, ಅಲ್ಲಿ ಗುರುತಿಸಿರುತ್ತೇನೆ. ನನ್ನ ಹೆಂಡತಿ ಮತ್ತು ಚಾಸಾ.3 ರವರು ಕೂಡ ಗುರುತಿಸಿರುತ್ತಾರೆ. ಸದರಿ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ನ್ಯಾಯಾಲಯದ ಮುಂದೆ ಇರುವ ಆರೋಪಿ. ಈ ಸಂಬಂದವಾಗಿ ನಾನು ಶಾಂತಿ ಗ್ರಾಮ ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ಈಗ ತೋರಿಸಿದ ದಾಖಲೆ ಅದೇ ಇರುತ್ತದೆ, ಅದರಲ್ಲಿ ನನ್ನ ರುಜು ಇರುತ್ತದೆ. ದಾಖಲೆ ನಿಪಿ.1 ಎಂದು, ಸಾಕ್ಷಿಯ ರುಜುವನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

3. ದೂರು ಕೊಟ್ಟ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು. ನಾನು ಮತ್ತು ನನ್ನ ಹೆಂಡತಿ ಸ್ಥಳವನ್ನು ತೋರಿಸಿದೆವು. ಪೊಲೀಸರು ಅಲ್ಲಿ ಪರಿಶೀಲನೆ ಮಾಡಿ ಮಹಜರ್ ಮಾಡಿ ನಮ್ಮ ಸಹಿಗಳನ್ನು ಪಡೆದರು. ಅದಕ್ಕೆ ನಾನು ರುಜು ಹಾಕಿರುತ್ತೇನೆ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ರುಜು ಇದೆ. ಅದನ್ನು ಸ್ಥಳದಲ್ಲಿ ಹಾಕಿರುತ್ತೇನೆ. ಈ ದಾಖಲೆಯನ್ನು ನಿಪಿ.2 ಎಂದು, ಸಾಕ್ಷಿ ರುಜುವನ್ನು ನಿಪಿ.2(ಎ) ಎಂದು ಗುರುತಿಸಲಾಯಿತು

4. ದೂರು ಕೊಟ್ಟ ಸುಮಾರು 15 ದಿನಗಳ ನಂತರ ಪೊಲೀಸರು ನನ್ನನ್ನು, ನನ್ನ ಹೆಂಡತಿ ಮತ್ತು ನನ್ನ ಮೊಮ್ಮಗಳು ಚಾಸಾ.3 ರವರನ್ನು ಠಾಣೆಗೆ ಕರೆಸಿದ್ದರು, ಅಲ್ಲಿ ಈ ದಿವಸ ನ್ಯಾಯಾಲಯದ

ಮುಂದಿರುವ ಆರೋಪಿತರು ಇದ್ದರು. ಪೊಲೀಸರು ಅವರನ್ನು ತೋರಿಸಿ, ಇವರಾ ಎಂದು ಕೇಳಿದರು. ನಾವು ಅವರನ್ನು ಗುರುತಿಸಿದೆವು. ಠಾಣೆಯಲ್ಲಿ ಪೊಲೀಸರು ಒಡವೆ ಮತ್ತು ಕೀ ಪ್ಯಾಡ್ ಮೊಬೈಲ್ ನ್ನು ತೋರಿಸಿದರು. ಮೊಬೈಲ್ ನನ್ನದಾಗಿತ್ತು, ಒಡವೆ ನನ್ನ ಹೆಂಡತಿಯದಾಗಿತ್ತು. ಅವುಗಳನ್ನು ನಾವು ನೋಡಿ ಗುರುತಿಸಿದೆವು, ನನಗೆ ಸೇರಿದ ಪರ್ಸ್, ಎ ಟಿ ಎಂ ಕಾರ್ಡ್ ಮತ್ತು ಹಣ ಸಿಗಲಿಲ್ಲ. ಚಿನ್ನವನ್ನು ನಾನು ನಂತರ ಬಿಡಿಸಿಕೊಂಡಿರುತ್ತೇನೆ. ಅದನ್ನು ಈ ದಿವಸ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಸದರಿ ಚೈನುಗಳಲ್ಲಿ ಮಾಂಗಲ್ಯ ತಾಳಿಗಳು ಇರಲಿಲ್ಲ. ನಂತರದಲ್ಲಿ ಒಂದು ಚೈನಿಗೆ ಇನ್ನೊಂದು ಎಳೆ ಸರವನ್ನು ಮತ್ತು ಮಾಂಗಲ್ಯ ಸರ ತಾಳಿಯನ್ನು ಮಾಡಿಸಿರುತ್ತೇವೆ. ಇನ್ನೊಂದು ಚೈನ್ ನಲ್ಲಿ ಇದ್ದಂತ ಪೆಡೆಂಟ್ ನ್ನು ತಾಳಿ ಮಾಡಿಸುವಾಗ ಮಾರಾಟ ಮಾಡಿರುತ್ತೇವೆ ಎನ್ನುತ್ತಾರೆ. ಸಾಕ್ಷಿ ಹಾಜರುಪಡಿಸಿದ ಈ ಚೈನುಗಳನ್ನು ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಲಾಯಿತು. ಸದರಿ ಸರಗಳು ನನ್ನ ಹೆಂಡತಿಯ ಕುತ್ತಿಗೆಯಿಂದ ಆರೋಪಿತನು ಕಿತ್ತುಕೊಂಡಾಗ ಮತ್ತು ನ್ಯಾಯಾಲಯದ ಆದೇಶದಂತೆ ಅದನ್ನು ನಾವು ನಮ್ಮ ವಶಕ್ಕೆ ಪಡೆದುಕೊಂಡಾಗ, ಈ ತೋರಿಸಿದ ಫೋಟೋಗಳಲ್ಲಿ ಕಂಡುಬಂದಂತೆ ಇತ್ತು. ಈ ಫೋಟೋವನ್ನು ನಿಪಿ.3 ಎಂದು ಗುರುತಿಸಲಾಯಿತು. ಸದರಿ ಕೀ ಪ್ಯಾಡ್ ಮೊಬೈಲ್ ನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈ ದಿವಸ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಅದನ್ನು ಮುದ್ದೆ ಮಾಲು 3 ಎಂದು ಗುರುತಿಸಲಾಯಿತು. ( ಸಾಕ್ಷಿಗೆ ಮುದ್ದೆ ಮಾಲು 1 ಮತ್ತು 2 ನ್ನು ವಾಪಸ್ಸು ಕೊಟ್ಟು ನ್ಯಾಯಾಲಯ ಆದೇಶ ಮಾಡಿದ ದಿನಾಂಕದಂದು ಹಾಜರುಪಡಿಸುವಂತೆ ಸೂಚಿಸಲಾಯಿತು.) ನಾನು ಪೊಲೀಸರಿಗೆ ಮರುಹೇಳಿಕೆಯನ್ನು ನೀಡಿರುತ್ತೇನೆ.

5. ಪೋಲೀಸರು ಘಟನಾ ಸ್ಥಳಕ್ಕೆ ಬಂದಾಗ ಫೋಟೋಗಳನ್ನು ತೆಗೆದಿರುತ್ತಾರೆ, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸಿದ 2 ಫೋಟೋಗಳನ್ನು ಅಲ್ಲೇ ತೆಗೆದಿರುತ್ತಾರೆ, ಅವುಗಳನ್ನು ನಿಪಿ. 4 ಮತ್ತು 5 ಎಂದು ಗುರುತಿಸಲಾಯಿತು.

6. ಆ ದಿವಸ ಆರೋಪಿ ಘಟನಾ ಸಮಯದಲ್ಲಿ ಬಳಸಿದ್ದ ಮೋಟಾರ್ ಬೈಕ್ ನ್ನು ನೋಡಿರುತ್ತೇನೆ, ಅದು ಯಾವ ಕಂಪನಿಯದೆಂದು ನೋಡಿಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್ ಎಂ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಸಕಾರಣ ಕಂಡುಬರದಿದ್ದ ಕಾರಣ, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಅನುಮತಿಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಃ

ಆ ದಿವಸ ಆರೋಪಿತರು ಚಾಕವನ್ನು ನೋಡಿದರೆ ಗುರುತಿಸುತ್ತೇನೆ. ಅದು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು.4.

**ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್ ಎಂ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಸಕಾರಣ ಕಂಡುಬರದಿದ್ದ ಕಾರಣ, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**